ಇ) ಮೇಲಿನಂತೆ

ಈ) ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಎಲ್ಲಾ ದಾಖಲೆಗಳು ಸಿ.ಒ.ಡಿ. ವಶದಲ್ಲಿರುವುದರಿಂದ, ದಾಖಲೆಗಳನ್ನು ಹಾಳು ಮಾಡುವುದು ಹಾಗೂ ಹಸ್ತಕ್ಷೇಪ ಮಾಡಿ ಸತ್ಯವನ್ನು ಮುಚ್ಚಿಡಲು ಅವಕಾಶವಿರುವುದಿಲ್ಲ.

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ

65 ಶ್ರೀ ರೋಷನ್ ಬೇಗ್ ಆರ್. :– ಮಾನ್ಯ ವೈದ್ಯಕೀಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೆ?

ಅ) ವಿಕ್ಟೋರಿಯಾ ಆಸ್ಪತ್ರೆಯಲ್ಲಿರುವ ಸುಟ್ಟಗಾಯಗಳ ಚಿಕಿತ್ಸಾ ವಿಭಾಗದಲ್ಲಿ ಎಷ್ಟು ಕೊಠಡಿಗಳಿವೆ ಹಾಗೂ ಈಗಿನ ಅವಶ್ಯಕತೆಗೆ ಅನುಗುಣವಾಗಿ ಕೊಠಡಿಗಳು ಸಾಕಷ್ಟಿವೆಯೇ; ಇಲ್ಲದಿದ್ದಲ್ಲಿ ಕೈಗೊಂಡ ಕ್ರಮಗಳೇನು;

ಆ) ಈ ಆಸ್ಪತ್ರೆಯಲ್ಲಿರುವ ಸಿಬ್ಬಂದಿಗಳ ಸಂಖ್ಯೆ ಎಷ್ಟು; ಆಸ್ಪತ್ರೆಗೆ ಅವಶ್ಯಕವಾದ ಸಿಬ್ಬಂದಿಗಳಿದ್ದಾರೆಯೆ;

ಇ) ರೋಗಿಗಳಿಗೆ ಒದಗಿಸುವಷ್ಟು ಔಷಧಿಗಳ ದಾಸ್ತಾನು ಇದೆಯೆ; ಇಲ್ಲವಾದಲ್ಲಿ ಈ ಬಗ್ಗೆ ಕೈಗೊಂಡಿರುವ ಕ್ರಮಗಳೇನು (ಪೂರ್ಣ ಮಾಹಿತಿ ನೀಡುವುದು)?

ಮಾನ್ಯ ವೈದ್ಯಕೀಯ ಶಿಕ್ಷಣ ಸಚಿವರು:–

ಅ) 03,

ಇಲ್ಲ

ಇರುವ ಕೊಠಡಿಗಳಲ್ಲೇ ನಿಬಾಯಿಸಲಾಗುತ್ತಿದೆ

ಆ) 778

ಇಲ್ಲ

ಇ) ಇದೆ

66 ಶ್ರೀ ರೋಷನ್ ಬೇಗ್ ಆರ್. (ಶಿವಾಜಿ ನಗರ):– ಮಾನ್ಯ ಕಾರ್ಮಿಕ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೆ?

ಅ) ಕರ್ನಾಟಕ ಕಟ್ಟಡ ನಿರ್ಮಾಣ ಕಾಯ್ದೆ (Karnataka Construction Workers Act) ಅಡಿಯಲ್ಲಿ ಅರ್ಹತೆಯನ್ನು ಹೊಂದಿರುವ ಕಾರ್ಮಿಕರ ಸಂಖ್ಯೆ ಎಷ್ಟು?

ಆ) ಇದರಲ್ಲಿರುವ ವರ್ಗಗಳನ್ನು (Categories) ಹೆಚ್ಚಿಸುವ ವಿಷಯ ಸರ್ಕಾರದ ಮುಂದಿದೆಯೇ; ಹಾಗಿದ್ದಲ್ಲಿ ಕೈಗೊಳ್ಳುತ್ತಿರುವ ಕ್ರಮದ ವಿವರಗಳನ್ನು ಒದಗಿಸಲಾಗುವುದೆ?

ಶ್ರೀ ಬಿ.ಎನ್. ಬಚ್ಚೇಗೌಡ (ಮಾನ್ಯ ಕಾರ್ಮಿಕ ಸಚಿವರು):–

ಅ) 42,322

ಆ) ಇಲ್ಲ

ಹಾಸ್ಟೆಲ್‌ಗಳನ್ನು ಹಾಗೂ ಮೊರಾರ್ಜಿ ಶಾಲೆ ಮಂಜೂರು ಮಾಡುವ ಬಗ್ಗೆ

6 ಶ್ರೀ ಸಂಗಮೇಶ್ವರ ಬಿ.ಕೆ. (ಭದ್ರಾವತಿ):– ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೆ?

ಅ) ಭದ್ರಾವತಿ ಮತ್ತು ಹೊಳೆಹೊನ್ನೂರು ಜಂಟಿ ಕ್ಷೇತ್ರವಾಗಿದ್ದು, ವಿದ್ಯಾರ್ಥಿಗಳಿಗನುಗುಣವಾಗಿ ಬಾಲಕ ಮತ್ತು ಬಾಲಕಿಯರ ವಿದ್ಯಾರ್ಥಿ ನಿಲಯಗಳನ್ನು ಮಂಜೂರು ಮಾಡಲು ಕ್ರಮ ಕೈಗೊಳ್ಳಲಾಗುವುದೇ;

ಆ) ಭದ್ರಾವತಿ ಕ್ಷೇತ್ರವು ತುಂಬಾ ಹಿಂದುಳಿದಿದ್ದು, ರೈತರು ಮತ್ತು ಕಾರ್ಮಿಕರ ಮಕ್ಕಳು ಹೆಚ್ಚಿನ ಸಂಖ್ಯೆಯಲ್ಲಿರುವುದರಿಂದ, ಇನ್ನೂ ಒಂದು ಮೊರಾರ್ಜಿ ಶಾಲೆಯ ಅವಶ್ಯಕತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ) ಭದ್ರಾವತಿ ಕ್ಷೇತ್ರದಲ್ಲಿ 4 ಲಕ್ಷ ಜನಸಂಖ್ಯೆ ಹೊಂದಿದ್ದು, ಅವುಗಳಲ್ಲಿ ಸುಮಾರು ಅರ್ಧದಷ್ಟು ಎಸ್.ಸಿ./ಎಸ್.ಟಿ. ಜನಾಂಗದವರು ವಾಸಿಸುತ್ತಿದ್ದು, ಅವರುಗಳ ಹಿತದೃಷ್ಟಿಯಿಂದ ಒಂದು ಅಂಬೇಡ್ಕರ್ ಭವನ ಮಂಜೂರು ಮಾಡಲು ಸರ್ಕಾರ ಕ್ರಮ ಕೈಗೊಳ್ಳುವುದೇ;

ಈ) ಭದ್ರಾವತಿ ಕ್ಷೇತ್ರದಲ್ಲಿ ಎಸ್.ಸಿ./ಎಸ್.ಟಿ. ಜನಸಂಖ್ಯೆ ಹೆಚ್ಚಾಗಿದ್ದು ಅವರುಗಳಲ್ಲಿ ಹೆಚ್ಚಾಗಿ ಹೆಣ್ಣು ಮಕ್ಕಳು ನಿರುದ್ಯೋಗ ಸಮಸ್ಯೆಯನ್ನು ಎದುರಿಸುತ್ತಿದ್ದು, ಎಸ್.ಸಿ./ಎಸ್.ಟಿ. ಕಾರ್ಪೋರೇಷನ್ ನಿಗಮದಿಂದ ಫಲಾನುಭವಿಗಳಿಗೆ ಹೆಚ್ಚಿಗೆ ಹಣ ಮಂಜೂರು ಮಾಡಲು ಸರ್ಕಾರ ಕ್ರಮ ಕೈಗೊಳ್ಳಲಾಗುವುದೇ;

ಉ) ಈ ಕ್ಷೇತ್ರಕ್ಕೆ ಹೈನುಗಾರಿಕಾ ತರಬೇತಿ ಕೇಂದ್ರ ಮತ್ತು ಉದ್ಯೋಗ ತರಬೇತಿ ಕೇಂದ್ರಗಳನ್ನು ಮಂಜೂರು ಮಾಡಲು ಸರ್ಕಾರ ಕ್ರಮ ಕೈಗೊಳ್ಳುವುದೇ?

ಶ್ರೀ ಡಿ. ಸುಧಾಕರ್ (ಸಮಾಜ ಕಲ್ಯಾಣ ಸಚಿವರು):–

ಅ) ಭದ್ರಾವತಿ ಮತ್ತು ಹೊಳೆಹೊನ್ನೂರು ಜಂಟಿ ಕ್ಷೇತ್ರದಲ್ಲಿ ಮೆಟ್ರಿಕ್ ಪೂರ್ವ / ಮೆಟ್ರಿಕ್ ನಂತರದ ಬಾಲಕ/ಬಾಲಕಿಯರಿಗಾಗಿ ಪರಿಶಿಷ್ಟ ಜಾತಿಯ 11 ವಿದ್ಯಾರ್ಥಿ ನಿಲಯಗಳು ಹಾಲಿ ನಡೆಯುತ್ತಿವೆ. ಈ ವಿದ್ಯಾರ್ಥಿ ನಿಲಯಗಳ ಮಂಜೂರಾತಿ ಸಂಖ್ಯೆ: 650 ಆಗಿದ್ದು